(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

**ದಿಃ-03-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ಪ್ರತಿವಾದಿ ನಂ.1 ಪರ ಶ್ರೀ. ಸಿ.ಎನ್.ಕೆ ವಕೀಲರಿಂದ ಃ**

7. ವಾದ ಪತ್ರದ ತಪಸೀಲು ಐಟಂ ನಂ.1 ರಲ್ಲಿರುವಂತಹ ಮನೆಯನ್ನು ನನ್ನ ತಂದೆಯವರು 1998-2000 ರಲ್ಲಿ ಕಟ್ಟಿ ಪೂರ್ಣಗೊಳಿಸಿರುತ್ತಾರೆ. ರಾಜಾಜಿನಗರದ ಬ್ಯಾಂಕಿನಲ್ಲಿ ನನ್ನ ತಂದೆಯವರು ಮನೆ ಕಟ್ಟಲು ಪಡೆದ ಸಾಲದಲ್ಲಿ ಇನ್ನೂ ರೂ.12,00,000/- ಕಟ್ಟಲು ಬಾಕಿ ಇದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ಆ ಸಾಲವನ್ನು ಮನೆ ಕಟ್ಟಲು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ರಾಜಾಜಿನಗರದ ಬ್ಯಾಂಕಿನಲ್ಲಿ ನನ್ನ ತಂದೆಯವರು ಪಡೆದ ಸಾಲ ನೀಡಲು ಇನ್ನೂ ಬಾಕಿ ಇದೆ ಎಂದರೆ ಸರಿ.

8. ಆ ಮನೆಯನ್ನು ಕಟ್ಟಿ ಸಂಪೂರ್ಣಗೊಳಿಸಲು ನನ್ನ ತಂದೆಯವರು ಇತರ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ವಿಶ್ವಾಸ ಪತ್ತಿನ ಸಹಕಾರ ಸಂಘದಲ್ಲಿಯೂ ಸಹ ನನ್ನ ತಂದೆಯವರು ಗೃಹ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ವಿಶ್ವಾಸ ಪತ್ತಿನ ಸಹಕಾರ ಸಂಘ, ಬಸವೇಶ್ವರನಗರ ಶಾಖೆ, ಬೆಂಗಳೂರು ಇವರು ದಿನಾಂಕ 18.08.2004 ರಂದು ಒಂದು ಪತ್ರವನ್ನು ನನ್ನ ತಂದೆಯವರಿಗೆ ನೀಡಿದ್ದು ಅದರಂತೆಯೇ ನನ್ನ ತಂದೆಯವರು ಗೃಹ ಸಾಲವನ್ನು ತೀರಿಸಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಈ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ.

9. ನನ್ನ ತಂದೆಯ ಅನುಮತಿ ಇಲ್ಲದೆ ಅವರ ಸಹಿಯುಳ್ಳ ಚೆಕ್ಕನ್ನು ಅವರಿಗೇ ಗೊತ್ತಿಲ್ಲದೇ ಪಡೆದು ಅವರ ಖಾತೆಯಿಂದ ರೂ.5,70,000/-ವನ್ನು ನನ್ನ ಖಾತೆಗೆ ಆ ಚೆಕ್ಕನ್ನು ಹಾಕಿ ಹಣವನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಮನೆಯ ಸಾಲವನ್ನು ತೀರಿಸಲು ಇಟ್ಟ ಚೆಕ್ಕನ್ನು ಅವರ ಅನುಮತಿ ಇಲ್ಲದೇ ಪಡೆದು ಅದನ್ನು ನನ್ನ ಹೆಸರಿನಲ್ಲಿ ಮಾನ್ಯಗೊಳಿಸಿ ಈವರೆಗೂ ಆ ಹಣವನ್ನು ನನ್ನ ತಂದೆಗೆ ಪಾವತಿಸಿಲ್ಲ ಎಂದರೆ ಸರಿಯಲ್ಲ.

10. ನನಗೆ ಮದುವೆಯಾಗಿರುತ್ತದೆ. ನನ್ನ ವಿವಾಹದ ವಿಚಾರವನ್ನು ನನ್ನ ತಂದೆಗೆ ನಾನು ತಿಳಿಸಿರುವುದಿಲ್ಲ.

ಪ್ರಶ್ನೆ ಃ ನಿಮ್ಮ ಮದುವೆ ಯಾವಾಗ ಆಗಿರುತ್ತದೆ ಮತ್ತು ನಿಮ್ಮ ಗಂಡನ ಹೆಸರೇನು?

ಉತ್ತರ ಃ ನನ್ನ ಮತ್ತು ನನ್ನ ಗಂಡನ ನಡುವೆ ವೈಮನಸ್ಸು ಇರುವುದರಿಂದ ಈ ಪ್ರಶ್ನೆಗೆ ನಾನು ಉತ್ತರಿಸುವುದಿಲ್ಲ.

11. ಮದುವೆಯಾದ ನಂತರ ನನ್ನ ತಂದೆಗೆ ನಾನು ಹೊಯ್ಸಳ ಎಂಬ ವ್ಯಕ್ತಿಯನ್ನು ಮದುವೆಯಾಗಿದ್ದೇನೆಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಹೊಯ್ಸಳನ ಜೊತೆ ಮದುವೆ ಬೇಡ ಬೇರೆ ಒಳ್ಳೆ ಕುಟುಂಬದ ಸಂಬಂಧ ನೋಡಿದ್ದೇನೆ ಎಂದು ನನ್ನ ತಂದೆ ನನ್ನ ಬಳಿ ಹೇಳಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ವಿರೋಧ ಮಾಡಿದ್ದರೂ ಸಹ ನಾನು ಹೊಯ್ಸಳರವರನ್ನು ಮದುವೆಯಾಗಿದ್ದೆ ಎಂದರೆ ಸರಿಯಲ್ಲ.

12. ನನಗೆ ಹೊಯ್ಸಳರವರ ಜೊತೆ ಮದುವೆಯಾಗಿ ಅವರ ಜೊತೆ ಸಂಸಾರ ಮಾಡಿದ್ದರಿಂದ ಒಂದು ಮಗು ಇದೆ ಎಂದರೆ ಸಾಕ್ಷಿಯು ನನಗೆ ಒಂದು ಮಗು ಇದೆ ಆದರೆ ಹೊಯ್ಸಳನ ಮಗು ಅಲ್ಲ ಎಂದು ನುಡಿಯುತ್ತಾರೆ. ನನ್ನ ಮಗುವಿನ ಹೆಸರು ಚೆರಿ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**